# ಆಹಾ ಸುದ್ದಿ!

★ ಸಸಿತೋಟ



ಗ್ರೀಸ್‌ನ ಈ ದ್ವೀಪ ಐಟೊಲಿಕೊದಲ್ಲಿ ಜೇಡಗಳದ್ದೇ ದರ್ಬಾರು. ಮರ–ಗಿಡಗಳನ್ನೆಲ್ಲ ಆವರಿಸಿರುವ ಜೇಡರ ಬಲೆ ಯಾವುದೋ ಹಾಲಿವುಡ್ ಹಾರರ್ ಸಿನಿಮಾ ದೃಶ್ಯದ ನೆನಪು ತರುವಂತಿದೆ. ಆದರೆ ಅಲ್ಲಿಯ ನಿವಾಸಿಗಳು ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲವಂತೆ. ಹಣದುಬ್ಬರದಿಂದಾಗಿ ಸಾಲದ ಬಲೆಯಲ್ಲಿ ಒದ್ದಾಡುತ್ತಿರುವ ಅವರಿಗೆ ಈ ಬಲೆಯ ಕುರಿತು ಯಾಕೆ ಬೇಕು ಉಸಾಬರಿ!

ಪ್ರಕೃತಿಯ ಜೊತೆ ನಿಕಟ ಸಂಪರ್ಕ ಇಟ್ಟುಕೊಳ್ಳುವುದು ಒಳ್ಳೆಯದೇ. ಆದರೆ ತೋಟದಲ್ಲಿ ನೈಸರ್ಗಿಕವಾಗಿ ಅಂದರೆ ಯಾವುದೇ ಉಡುಗೆತೊಡುಗೆಯ ಗೊಡವೆಯಿಲ್ಲದೇ ಕೆಲಸ ಮಾಡುವುದೆಂದರೆ.. ಫ್ಲಾರಿಡಾದಲ್ಲಿ ಯುವಕನೊಬ್ಬ ತನ್ನ ಮನೆಯ ಮುಂದಿನ ತೋಟದಲ್ಲಿ ನಗ್ನನಾಗಿ ಕೆಲಸ ಮಾಡುತ್ತಾನಂತೆ. ಅಕ್ಕಪಕ್ಕದವರು ಪೊಲೀಸರಿಗೆ ದೂರು ಕೊಟ್ಟರೂ ಕೇರ್ ಮಾಡಲಿಲ್ಲವಂತೆ. ಮತ್ತೆ.. ತಮ್ಮ ತಮ್ಮ ಕೆಲಸ ಮಾಡಿಕೊಳ್ಳುವುದು ಬಿಟ್ಟು ಅವರೇಕೆ ಅವನ ಮೇಲೆ ಕಣ್ಣಿಡಬೇಕು!



ಗ್ರೀಸ್‌ನಲ್ಲಿ ನಡೆದ ಹೊರಾಂಗಣ ಬೆಕ್ಕಿನ ನಡಿಗೆಯಲ್ಲಿ ರೂಪದರ್ಶಿಗಳು ಧರಿಸಿದ ದಿರಿಸಿನಲ್ಲಿ ಊಹೆಗೂ ಮೀರಿದ ಕಚ್ಚಾ ಸಾಮಗ್ರಿಗಳು ಸ್ಥಾನ ಪಡೆದಿದ್ದವಂತೆ. ಪಾಪ್‌ಕಾರ್ನ್, ಪ್ಲಾಸ್ಟಿಕ್ ಕವರ್, ಮರದ ರೆಂಬೆ, ಹೊಲಿಗೆ ಯಂತ್ರದ ಬಾಬಿನ್, ಹಕ್ಕಿಯ ರೆಕ್ಕೆ–ಪುಕ್ಕ, ವೃತ್ತಪತ್ರಿಕೆಗಳು, ಹೀರುಗೊಳವೆ, ಹಗ್ಗ.. ದಿವಾಳಿಯಾಗಿರುವ ಗ್ರೀಸ್‌ನ ಸದ್ಯದ ಪರಿಸ್ಥಿತಿಯನ್ನೇ ತೋರಿಸಿದ್ದಾರೆ ವಸ್ತ್ರ ವಿನ್ಯಾಸಕರು.



ಫ್ರಾನ್ಸ್‌ನ ಫಿಲಿಪ್ ಗಿಲೆಟ್‌ಗೆ ಮೊಸಳೆ ಮನುಷ್ಯ ಎನ್ನಿ, ಹಾವಿನ ಮನುಷ್ಯ ಬೇಕಾದರೂ ಎನ್ನಿ. ಒಟ್ಟಿನಲ್ಲಿ ಆತ ಸರೀಸೃಪ ಪ್ರಿಯ. 67 ವರ್ಷ ವಯಸ್ಸಿನ ಗಿಲೆಟ್ 400ಕ್ಕಿಂತ ಅಧಿಕ ಸರೀಸೃಪಗಳ ಜೊತೆ ಬದುಕನ್ನು ಹಂಚಿಕೊಂಡಿದ್ದಾನಂತೆ. ಮಾನವರ ಮೇಲೆ ನಂಬಿಕೆ ಕಳೆದುಕೊಂಡಿದ್ದು, ಮೇಲಕ್ಕೆ ಹೋಗಿರುವ ಫಿಮೇಲ್‌ಗಳತ್ತ ಬೊಟ್ಟು ಮಾಡುತ್ತಾನಂತೆ.

ವಾಷಿಂಗ್ಟನ್ನಿನ ಕೆಲವು ರಸ್ತೆಗಳಲ್ಲಿ ಕಾರ್ ಪೂಲಿಂಗ್ ಕಡ್ಡಾಯವಂತೆ. ಪೊಲೀಸರ ಕಣ್ಣಿಗೆ ಮಣ್ಣೆರಚಲು ದೊಡ್ಡ ಕಾರಿನ ಮಾಲೀಕನೊಬ್ಬ ಸಣ್ಣ ಟ್ರಿಕ್ ಮಾಡಿ ಸಿಕ್ಕಿಬಿದ್ದಿದ್ದಾನಂತೆ. ಅಸ್ಥಿಪಂಜರಕ್ಕೆ ಕೋಟು, ಹ್ಯಾಟು ಹಾಕಿ ಪ್ರಯಾಣಿಕನಂತೆ ತೋರಿಸಲು ಹೋಗಿ ದಂಡ ಕಟ್ಟಿದ್ದಾನಂತೆ. ತನ್ನ ಸೃಜನಶೀಲತೆಗಾದರೂ ಪೊಲೀಸರು ಸಲಾಂ ಮಾಡಬಹುದಿತ್ತು ಎಂದು ಸಾಮಾಜಿಕ ಜಾಲತಾಣದಲ್ಲಿ ಗೋಳು ತೋಡಿಕೊಂಡಿದ್ದಾನೆ ಆತ.



ಸೆಲೆಬ್ರಿಟಿಗಳು ಬಳಸಿದ ಉಡುಪು, ಚಪ್ಪಲಿ ಮತ್ತಿತರ ವಸ್ತುಗಳನ್ನು ಲಕ್ಷ ಲಕ್ಷ ಕೊಟ್ಟು ಖರೀದಿಸುವುದು ಮಾಮೂಲು. ಆದರೆ ಅವರ ಕಣ್ಣೀರಿಗೂ ಬೆಲೆ ಬಂದುಬಿಟ್ಟಿದೆ. ಅಮೆರಿಕದ ಪಾಪ್ ಗಾಯಕಿ ಮಿಲಿ ಸೈರಸ್ ಸಹೋದರಿ ನೋವಾ ಸೈರಸ್ ಕಣ್ಣೀರಿಗೆ ಬರೋಬ್ಬರಿ 8.6 ಲಕ್ಷ ರೂಪಾಯಿಯಂತೆ. ಗೆಳೆಯನ ಜೊತೆ ರಗಳೆ ಮಾಡಿಕೊಂಡ ನೋವಾ ಸುರಿಸಿದ ಕಣ್ಣೀರನ್ನು ಬಾಟಲ್‌ನಲ್ಲಿ ಸಂಗ್ರಹಿಸಿ ಆನ್‌ಲೈನ್‌ನಲ್ಲಿ ಮಾರಾಟಕ್ಕಿಡಲಾಗಿದೆ. ಆದರೆ ಎಚ್ಚರಿಕೆ– ಇದು ಸೇವನೆಗೆ ಯೋಗ್ಯವಲ್ಲ.